ದಲ್ಲಿ ನಾವು ಅವರನ್ನು ಖಾಯಂ ಮಾಡುವುದಾಗಿ ಎಂಬ ಉದ್ದೇಶದಿಂದ ಮಾಡಿದಾಗ ಈ, ವಿಚಾರದ ಬಗ್ಗೆ ಹೈಕೋರ್ಟಿಗೆ ಹೋಗಿದು ಮಾನ್ಯ ಸದಸ್ಯರಿಗೂ ಗೊತ್ತಿರಬಹುದು. ಈ ವಿಚಾರ ಹೈಕೋರ್ಟಿಗೆ ಹೋದಾಗ ಹೈಕೋರ್ಟಿನವರು ಇವರಿಬ್ಬರಿಗೂ ಸೇರಿ ಶೇಕಡ ೫೦ರಷ್ಟು ಮಾತ್ರ ಕೊಡಬಹುದು. ಅದಕ್ಕಿಂತಲೂ ಹೆಚ್ಚು ಮಾಡಲಿಕ್ಕೆ ಬರುವುದಿಲ್ಲ ಎಂದು ಕೇಳಿದರು. ಸುಮಾರು ೧೪-೧೫ ಸಾವಿರ ಜನ ಲೋಕಲ್ ಕ್ಯಾಂಡಿಡೇಟ್ಸ್ ಇದ್ದರು, ಬಹುತೇಕವಾಗಿ ಅವರು ಸರ್ಕಾರಿ ನೌಕರಿಗೆ ಸೇರಿಕೊಂಡಿದ್ದಾರೆ ಇರತಕ್ಕವರು ೬-೭-೮ ಸಾವಿರ ಜನ ನಮ್ಮ ಸ್ಟೈಫೆಂಡಿಯರಿ ಪದವೀಧರರು ಇದ್ದಾರೆ. ಅವರೂ ಸಹ ಅವಕಾಶ ಸಿಕ್ಕಿದ ಹಾಗೆ ಸರ್ಕಾರಿ ನೌಕರಿಗೆ ಹೋಗುತ್ತಾರೆ.ಅವರಿಗೆ ನಾವು ವಯಸ್ಸಿನ ವಿನಾಯಿತಿಯನ್ನು ಏರಿಸಿದ್ದೇವೆ. ಅವರುಗಳಿಗೆ ಬೇರೆ ಕಡೆ ನೌಕರಿ ಸಿಕ್ಕುವುದು ಕಷ್ಟ ಎಂದು ತಿಳಿದುಕೊಂಡು ಮೂರು ಸಾರಿ ವಯಸ್ಸಿನ ವಿನಾಯಿತಿಯನ್ನು ಹೆಚ್ಚು ಮಾಡಿದ್ದೇವೆ ಆದರಿಂದ ಅವರ ಸಮಸ್ಯೆ ಬಗೆಹರಿಯುತ್ತದೆ,

ಸರ್ಕಾರಿ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳು

೯೮೧ ಶ್ರೀ ಕೆ. ಬಿ. ಕೋಳಿವಾಡ. (ರಾಣೆಬೆನ್ನೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಲ್ಲಾ ಇಲಾಖೆಗಳಲ್ಲಿ ಮಂಜೂರಾತಿ ಪಡೆದು ಭರ್ತಿಯಾಗದೇ ಖಾಲಿ ಇರುವ ಹುದ್ದೆಗಳು ಎಷ್ಟು.

ಆ) ಮುಂದಿನ ಮೂರು ವರ್ಷಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಿಲ್ಲವೆಂದು ಸರ್ಕಾರಿ ಆಜ್ಞೆ ಹೊರಡಿಸಿರುವುದು ನಿಜವೇ?

ಇ) ಹಾಗಿದ್ದಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕಾರ್ಯಕ್ರಮ ಹಾಕಿ ಕೊಳ್ಳಲಾಗಿದೆ

ಶ್ರೀ ರಾಮಕೃಷ್ಣ ಹೆಗಡೆ. (ಮುಖ್ಯಮಂತ್ರಿಯವರು).—

ಅ) ೪೪, ೩೯೯.

ಆ) ಇಲ್ಲ.

ಇ) ಹುದ್ದೆಗಳು ಖಾಲಿಯಾಗುವುದು ಮತ್ತು ಅವುಗಳನ್ನು ಭರ್ತಿ ಮಾಡುವುದು ಒಂದು ನಿರಂತರ ಕ್ರಿಯೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಅವಶ್ಯಕತೆಯಿರುವಲ್ಲಿ ವಿಶೇಷ ಯಆದೇಶವನ್ನು ಸಡಿಲಗೊಳಿಸಲಾಗುತ್ತಿದೆ.

ಶ್ರೀ ಕೆ. ಬಿ. ಕೋಳಿವಾಡ.—ನಿವೃತ್ತಿ ವಯಸ್ಸನ್ನು ಕಡಿಮೆ ಮಾಡಿದರೆ. ಈ ನಿರುದ್ಯೋಗಿ ಪದವೀಧರರಿಗೆ ಅನುಕೂಲವಾಗುತ್ತದೆ, ಅದಲ್ಲದೆ ಸಿಂಗಲ್ ಟೀಚರ್ ಶಾಲೆಗಳು ಏನಿವೆ ಅಲ್ಲಿ ಕನಿಷ್ಟ ಪಕ್ಷ ಡಬ್ಬಲ್ ಟೀಚರ್ ನೇಮಕ ಮಾಡತಕ್ಕ ವಿಚಾರ ಸರ್ಕಾರದಲ್ಲಿದೆಯೇ?

ಶ್ರೀ ರಾಮಕೃಷ್ಣ ಹೆಗಡೆ.—ನಿವೃತ್ತಿ ವಯಸ್ಸನ್ನು ೫೫ ರಿಂದ ೫೮ಕ್ಕೆ ಏರಿಸಬೇಕಾದರೆ ಬಹಳ ಯೋಚನೆ ಮಾಡಿ ಆದರಿಂದ ಆಗತಕ್ಕ ಲಾಭ ಏನು ನಷ್ಟ ಏನು ಸಾಧಕಬಾಧಕ ಏನು ಎಂದು ಯೋಚನೆ ಮಾಡಿ ನಿರ್ಣಯ ತೆಗೆದುಕೊಂಡಿದ್ದೇವೆ. ಆದ್ದರಿಂದ, ಆ ನಿರ್ಣಯವನ್ನು ವಾಪಸ್ಸು ಬದಲಾಯಿಸತಕ್ಕ ಅಗತ್ಯ ಇಲ್ಲ. ಇಡೀ ದೇಶದಲ್ಲಿ ಒಂದೆರಡು ರಾಜ್ಯಗಳನ್ನು ಬಿಟ್ಟರೆ ಎಲ್ಲಾ ರಾಜ್ಯಗಳಲ್ಲೂ ನಿವೃತ್ತಿ ವಯಸ್ಸನ್ನು ೫೮ಕ್ಕೆ ಏರಿಸಿದ್ದಾರೆ ಹೈಕೋರ್ಟ್‌ನಲ್ಲಿ, ಸುಪ್ರೀಮ್ ಕೋರ್ಟ್‌ನಲ್ಲಿಯೂ ಬಹಳ ಹೆಚ್ಚು ಏರಿಸಿದ್ದಾರೆ. ಮಾನ್ಯ ಸದಸ್ಯರ ವಾದವನ್ನು ವಾದಕ್ಕಾಗಿ ಒಂದು ಕ್ಷಣ ಒಪ್ಪಿಕೊಂಡರು ೫೮ ರಿಂದ ೫೫ಕ್ಕೆ ಇಳಿಸಿದರೆ ಎಷ್ಟು ಜನರಿಗೆ ಸರ್ಕಾರಿ ನೌಕರಿ ಸಿಕ್ಕಬಹುದು ೫೫ ರಿಂದ ೫೦ಕ್ಕೆ ಇಳಿಸಿದರೆ ಆದರಿಂದ ಎಷ್ಟು ಜನರಿಗೆ ಸರ್ಕಾರಿ ನೌಕರಿ ಸಿಕ್ಕುತ್ತದೆ. ಒಂದು ಮಾತನ್ನು ಸ್ಪಷ್ಟವಾಗಿ ಸಾರ್ವಜನಿಕ ತಿಳುವಳಿಕೆಗಾಗಿ ಹೇಳುತ್ತೇನೆ, ಉದ್ಯೋಗ ಎಂದರೆ ಸರ್ಕಾರಿ ನೌಕರಿ ಒಂದೇ ಅಲ್ಲ. ಅನೇಕ ಜನರ ಮನಸ್ಸಿನಲ್ಲಿ ಈ ಒಂದು ತಪ್ಪು ಕಲ್ಪನೆ ಇದೆ ಆದೇನೆಂದರೆ ಉದ್ಯೋಗ ಎಂದರೆ ಸರ್ಕಾರಿ ನೌಕರಿ ಎಂಬಂದಾಗಿ. ಸರ್ಕಾರೀ ನೌಕರಿಯೇ ಒಂದು ಉದ್ಯೋಗವಲ್ಲ. ಲೆಕ್ಕ

ಹಾಕಿದರೆ ನೂರರಲ್ಲಿ ೨ ಕ್ಕಿಂತಲೂ ಕಡಿಮೆ ಈ ಸರ್ಕಾರೀ ನೌಕರರು ಸಿಕ್ಕುತ್ತಾರೆ. ಆದ್ದರಿಂದ ಈ ಉದ್ಯೋಗಾವಕಾಶವನ್ನು ಹೆಚ್ಚು ಮಾಡುವುದಕ್ಕೆ ನಾವು ಬೇರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಇನ್ನು ಸಿಂಗಲ್ ಟೀಚರ್ಸ್ ಇರತಕ್ಕ ಕಡೆಗಳಲ್ಲಿ ಡಬಲ್ ಟೀಚರ್ಸ್ ಮಾಡಬೇಕೆಂದು ಹೇಳುವಂಥ ವಿಚಾರ ಸರ್ಕಾರದಲ್ಲಿದೆ. ಆದರೆ ಎಲ್ಲವನ್ನೂ ಒಂದೇಸಾರಿ ಮಾಡುವುದಕ್ಕಾಗುವುದಿಲ್ಲ. ಇದನ್ನು ಕ್ರಮ ಕ್ರಮವಾಗಿ ಮಾಡಬೇಕಾಗಿಂತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂಖ್ಯಿ ಮಂತ್ರಿಗಳುಈಗತಾನೆ ಹೇಳಿದರು, ಗೃಹ ಇಲಾಖೆ, ಆರೋಗ್ಯ ಇಲಾಖೆ ಮತ್ತು ವಿದ್ಯಾ ಇಲಾಖೆಗಳಿಗೆ ಈ ಎಕಾನಮಿ ಆರ್ಡರ್ ಅಪ್ಲೈ ಆಗುವುದಿಲ್ಲ. ಇದನ್ನು ಈ ಇಲಾಖೆಗಳಿಗೆ ಸಡಿಲ ಮಾಡಿದ್ದೇವೆಂದು ಹೇಳಿದ್ದಾರೆ. ಬಹುಶ: ಈಗಾಗಲಿ ಅವರಿಗೆ ಅನೇಕ ದೂರುಗಳು ಬಂದಿರಬಹುದು, ವಿದ್ಯಾ ಇಲಾಖೆಯಲ್ಲಿ ಅಂದರೆ ಅದು ಸರ್ಕಾರದವರು ನಡೆಸುತ್ತಿರುವ ಶಾಲೆಗಳಲ್ಲಾಗಲಿ ಏಡೆಡ್ ಶಾಲೆಗಳಲ್ಲಾಗಲಿ ಅನೇಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ.ಸೈನ್ಸ್ ಟೀಚರ್ಸ್ ಇಲ್ಲ, ಇನ್ನೂ ಬೇರೆ ಬೇರೆ ವಿಷಯಗಳ ಟೀಚರ್ಸ್ ಇಲ್ಲ.ಹಳ್ಳಿಗಳಲ್ಲಿ ಶಾಲೆಗಳು ಕೆಲಸಮಾಡುತ್ತಿವೆ. ನಿಪ್ಪ್ರ ಈ ಎಕಾನಮಿ ಆರ್ಡರ್ ಇರುವುದರಿಂದ ಆ ಶಾಲೆಗಳಲ್ಲಿರತಕ್ಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಆಗಿಲ್ಲ. ಹಾಲಿ ಖಾಲಿ ಇರತಕ್ಕ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಡೈರೆಕ್ಟೊರೇಟ್ ಸಿಬ್ಬಂದಿ ಅಂದರೆ ಡಿ. ಪಿ. ಐ.ರವರು ಪರ್ಮಿಷನ್‌ನನ್ನು ಕೊಡುತ್ತಿಲ್ಲ. ತಮಗೂ ಗೊತ್ತಿದೆ ಮೊನ್ನೆತಾನೇ ಎಸ್. ಎಸ್. ಎಲ್. ಸಿ. ಪರೀಕ್ಷೆ ಮುಗಿದಿದೆ. ಈಗ ನೀವು ಈ ಆರ್ಡರನ್ನು ರಿಲ್ಯಾಕ್ಸ್ ಮಾಡಿದರೆ ಏನು ಪ್ರಯೋಜನ? ಆ ಮಕ್ಕಳ ಗತಿ ಏನು? ಈ ಇಲಾಖೆಗಳು ಏಸೆನ್‌ಷಿಯಲ್ ಸರ್ವೀಸ್ ಎಂದು ಹೇಳಿರುವುದರಿಂದ ಇದನ್ನು ತೀವ್ರವಾಗಿ ಪರಿಗಣಿಸಿ ಹಾಲಿ ಖಾಲಿ ಇರತಕ್ಕ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುವಂತೆ ಆರ್ಡರ್ ಮಾಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರವನ್ನು ನಾನು ಪರಿಶೀಲಿಸುತ್ತೇನೆ.

Smt MUKTHARUNNISA.—By following rules and regulations of the Govnroment, in Mysore, they have selected about 200 village Accountants, & Stenographers, Typists & others in K S R T C, some two years back but uptill now, they have not been given posting. May I know the reasons for not giving them posting sofar ?

Sir, these Candidates have been selected by the Recruitment Committee. Their names were published on the Notice Board and they are all selected Candidates. these selected candidates have not been given posting orders, why is it happenning like this ?

SRI RAMAKRISHNA HEGDE.—This is a specific question and I have to get the information.

SMT. MUKTHARUNNISA.—In Mysore, for K S R T C and other Offices, they have interviewed the candidates and selection was made the selected Candidates for the posts of Village Accountant, Typist or Stenographer, have not been given posting order even after a lapse of two years. why is it delayed ?